ಪಿ.ಡಬ್ಲ್ಯು-01 **P Nagarajappa**

**ಸಾಕ್ಷಿಯನ್ನು ದಿನಾಂಕಃ 03.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಎಸ್ ಎಮ್ ವಕೀಲರಿಂದಃ**

ನಾನು ಹೆಚ್ ಡಿ ಕೋಟೆ ವಾಸಿಯಾಗಿರುತ್ತೇನೆ. ನನ್ನ ಸ್ವಂತ ಊರು ಹೆಚ್ ಡಿ ಕೋಟೆ ತಾಲ್ಲೂಕು ಚಿಕ್ಕ ಕೆರೆಯೂರು ಗ್ರಾಮ ಎಂದರೆ ಸರಿ. ಆರೋಪಿಯು ಹಾರ್ಡವೇರ್ ಅಂಗಡಿ ನಡೆಸುತ್ತಿದ್ದು ನಾನು ಅವರ ಅಂಗಡಿಗೆ ಪೈಪು, ಮೋಟರ್ ಇತ್ಯಾದಿಗಳನ್ನು ಖರೀದಿಸಲು ಹೋಗುತ್ತಿದ್ದು ಆ ಮೂಲಕ ಪರಿಚಿತರಾಗಿರುತ್ತಾರೆ. ನಾನು ಸಿವಿಲ್ ಕಾಂಟ್ರಾಕ್ಟರ್ ಆಗಿ ಕೆಲಸ ಮಾಡುತ್ತಿದ್ದು ಆ ಬಗ್ಗೆ ಪರವಾನಗಿ ಹೊಂದಿರುತ್ತೇನೆ. ನಾನು ಆರೋಪಿಯ ಅಂಗಡಿಯಲ್ಲಿ ವರ್ಷಕ್ಕೆ ಸುಮಾರು 5-6 ಲಕ್ಷ ಮೌಲ್ಯದ ಹಾರ್ಡವೇರ್ ವಸ್ತುಗಳನ್ನು ಖರೀದಿ ಮಾಡುತ್ತಿದ್ದೇನು. ನಾನು ಕೆಲವೊಮ್ಮೆ ಆರೋಪಿಯಿಂದ ಸಾಲದ ರೂಪದಲ್ಲಿ ವಸ್ತುಗಳನ್ನು ಖರೀದಿಸುತ್ತಿದ್ದೇ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಣವನ್ನು ಕೊಟ್ಟು ನಂತರವೇ ವಸ್ತುಗಳನ್ನು ಖರೀದಿಸುತ್ತಿದ್ದೇ ಎಂದು ನುಡಿಯುತ್ತಾರೆ.

ನಾನು ಹಾಗೂ ಆರೋಪಿ ಕಳೆದ ಸುಮಾರು 6-7 ವರ್ಷಗಳಿಂದ ಪರಿಚಿತರು. ಆರೋಪಿ ನನ್ನಿಂದ 01.10.2022 ರಂದು 4 ಲಕ್ಷ ಸಾಲ ಪಡೆದಿರುತ್ತಾರೆ. ಆರೋಪಿಗೆ ನಾನು ಸಾಲ ನೀಡಿದ ಒಂದು ವಾರದ ಹಿಂದೆ ಅವರು ನನ್ನನ್ನು ಭೇಟಿಯಾಗಿ 4 ಲಕ್ಷ ಸಾಲ ಕೇಳಿದ್ದರು. ಆರೋಪಿ ಸಾಲ ಕೇಳಲು ಬಂದಾಗ ಅವರ ಜೊತೆ ಬೇರೆ ಯಾರೂ ಬಂದಿರಲಿಲ್ಲ ಹಾಗೂ ನನ್ನ ಜೊತೆಯು ಬೇರೆ ಯಾರೂ ಇದ್ದಿರಲಿಲ್ಲ. ನಾನು ಕಾಂಟ್ರಾಕ್ಟ್ ಕೆಲಸದಿಂದ ಬಂದ ಹಣದಿಂದ ಆರೋಪಿಗೆ ಸದರಿ ಸಾಲ ನೀಡಿರುತ್ತೇನೆ. ನಾನು ಸದರಿ ಹಣವನ್ನು ನನ್ನ ಬ್ಯಾಂಕ್ ಆಫ್ ಬರೋಡಾದಿಂದ ಸ್ವಲ್ಪ ಹಣ ಹಾಗೂ ಮನೆಯಲ್ಲಿದ್ದ ನಗದು ಹಣವನ್ನು ಆರೋಪಿಗೆ ಸಾಲ ನೀಡಿರುತ್ತೇನೆ.

ದಿನಾಂಕ 01.10.2022 ರಂದು ನಾನು ಬ್ಯಾಂಕಿನಿಂದ ಹಣವನ್ನು ತೆಗೆದಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಬ್ಯಾಂಕಿನಿಂದ ಮೊದಲೇ ತೆಗೆದಿಟ್ಟ ನಗದು ಹಣ ಮನೆಯಲ್ಲಿದ್ದ ನಗದು ಹಣದಿಂದ ಆರೋಪಿಗೆ ಸಾಲ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕ 01.10.2022 ರಂದು ನಾನು ಆರೋಪಿಗೆ ಯಾವುದೇ 4 ಲಕ್ಷ ಸಾಲವಾಗಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯಿಂದ ಯಾವುದೇ ಸಾಲ ಪಡೆದಿರುವುದಿಲ್ಲ, ಬದಲಾಗಿ ಆರೋಪಿಗೆ ಸಾಲ ನೀಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಗೆ ನಾನು ಸಾಲ ನೀಡಿದ ಮೂರು ತಿಂಗಳ ನಂತರ ಅವರನ್ನ ಸಾಲದ ಹಣಕ್ಕಾಗಿ ಭೇಟಿಯಾದಾಗ ದಿನಾಂಕ 10.01.2023 ರಂದು ಆರೋಪಿ ನನಗೆ ನಿಪಿ-1 ರ ಚೆಕ್ಕನ್ನು

ನೀಡಿರುತ್ತಾರೆ. ಆರೋಪಿ ನನಗೆ ನಿಪಿ-1 ರ ಚೆಕ್ಕನ್ನು ನೀಡಿದ ಸಂದರ್ಭದಲ್ಲಿ ನಾನು ಹಾಗೂ ಆರೋಪಿ ಮಾತ್ರ ಇದ್ದಿರುತ್ತೇವೆ. ಆರೋಪಿ ನಿಪಿ-1 ರ ಚೆಕ್ಕನ್ನು ನನಗೆ ಅವರ ಅಂಗಡಿಯಲ್ಲಿ ನೀಡಿರುತ್ತಾರೆ. ನಿಪಿ-1ರ ಚೆಕ್ಕನ್ನು ಆರೋಪಿ ನನಗೆ ಬರೆದುಕೊಟ್ಟಿರುತ್ತಾರೆ. ನಿಪಿ-1 ರಲ್ಲಿರುವ ಬರವಣಿಗೆ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನಿಂದ ಯಾವುದೇ 4 ಲಕ್ಷ ಸಾಲ ಪಡೆದಿಲ್ಲ ಹಾಗೂ ಆ ಸಂಬಂಧ ಯಾವುದೇ ನಿಪಿ-1 ರ ಚೆಕ್ಕನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ವಕೀಲರ ಮೂಲಕ ಕಳುಹಿಸಿದ್ದೇ ಎಂದು ಹೇಳಲಾದ ನೋಟಿಸ್ ಆರೋಪಿಗೆ ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ಆರೋಪಿಯ ಸಹಿಗೂ ಹಾಗೂ ನಿಪಿ-5 ರಲ್ಲಿ ಸಹಿಗೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿ ನಿಪಿ-5 ರಲ್ಲಿ ಅವರು ಬೇಕಂತಲೇ ವ್ಯತ್ಯಾಸವಾಗಿ ಸಹಿ ಮಾಡಿರಬಹುದು ಎಂದು ನುಡಿಯುತ್ತಾರೆ. ನಾನು ಈ ನ್ಯಾಯಾಲಯದಲ್ಲಿ ಹಣ ವಸೂಲಾತಿಯ ಸಂಬಂಧ ಒಟ್ಟು 3 ಕೇಸುಗಳನ್ನು ಹಾಕಿರುತ್ತೇನೆ. ಅದರ ಹಿಂದೆ 2-3 ಕೇಸು ಹಾಕಿದ್ದು ಅವು ಮುಗಿದಿರುತ್ತದೆ ಎಂದು ನುಡಿಯುತ್ತಾರೆ. ಹಿಂದೆ ಈ ನ್ಯಾಯಾಲಯದಲ್ಲಿ ನಾನು ಸುಮಾರು 8-10 ಕೇಸುಗಳನ್ನು ಹಣ ವಸೂಲಾತಿಗಾಗಿ ಹೂಡಿದ್ದೆ ಎಂದರೆ ಸರಿಯಲ್ಲ.

ನಾನು ಬಡ್ಡಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಗುತ್ತಿಗೆದಾರ ಕೆಲಸದಲ್ಲಿ ಆದ ಹಣದ ವ್ಯವಹಾರದ ಹೊರತು ಬೇರೆ ಯಾವುದೇ ಬಡ್ಡಿ ವ್ಯವಹಾರ ನಡೆಸುತ್ತಿಲ್ಲ. ಆರೋಪಿ ನಾನು ಪರಿಚಿತರಾಗಿದ್ದು ಅವರ ಅಂಗಡಿಯಲ್ಲಿ ನಾನು ವ್ಯವಹರಿಸುವ ಸಮಯದಲ್ಲಿ ಆರೋಪಿಯಿಂದ ಪಡೆದುಕೊಂಡ ಚೆಕ್ಕನ್ನು ದುರ್ಬಳಕೆ ಮಾಡಿಕೊಂಡು ಅವರ ವಿರುದ್ಧ ಈ ಸುಳ್ಳು ಪ್ರಕರಣವನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಕಾಂಟ್ರಾಕ್ಟ್ ಕೆಲಸ ಮಾಡಿಕೊಂಡಿದ್ದ ಸಂಬಂಧ ಇರುವ ಲೈಸನ್ಸ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ. ಸಾಕ್ಷಿ ಮುಂದುವರೆದು ಈಗ ಯಾವುದೇ ಕಾಂಟ್ರಾಕ್ಟ್ ಕೆಲಸ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಆರೋಪಿಯಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣ ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಯಿವರೆದ ಪಾಟೀ ಸವಾಲಿಗಾಗಿ ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**